## ಭಟ್ಟರ್ ಸ್ಕಾಚ್

- **ಚಂದ್ರು, ಬಾಣಸವಾಡಿ**
  ಭಟ್ರೇ, ಫೇಸ್‌ಬುಕ್ ಮತ್ತು ರಿಯಲ್ ಲೈಫ್‌ಗೆ ಇರುವ ವ್ಯತ್ಯಾಸವೇನು?
  – **ಫೇಸ್‌ಬುಕ್‌ನಲ್ಲಿ ಎಲ್ಲರೂ 'ಹ್ಯಾಪಿ', ರಿಯಲ್ ಲೈಫ್‌ನಲ್ಲಿ ಎಲ್ಲರೂ 'ಕಾಪಿ-ಪೇಸ್ಟ್'!**

- **ರವಿ ಹಾದಿಮನಿ, ಗುಬ್ಬಿ**
  ಭಟ್ರೇ, ಅಡುಗೆ ಮನೆಯಲ್ಲಿ ಗಂಡನಿಗಿರುವ ಸ್ಥಾನವೇನು?
  – **ಪಾತ್ರೆ ತೊಳೆಯುವ 'ಚೀಫ್ ಎಕ್ಸಿಕ್ಯೂಟಿವ್ ಆಫೀಸರ್'!**

- **ನೂತನ್, (ಇಮೇಲ್ ಮೂಲಕ)**
  ಭಟ್ರೇ, ಅನುಭವ ಅಂದರೇನು?
  – **ತಪ್ಪುಗಳನ್ನು ಮಾಡಿದ ಮೇಲೆ ಸಿಗುವ ಜ್ಞಾನ, ಆದರೆ ಆ ತಪ್ಪು ಮಾಡುವಾಗ ಅದು ಕೈಗೆ ಸಿಗುವುದಿಲ್ಲ!**

- **ರಾಮನಾರಾಯಣ ಹೆಗಡೆ, ಶಿರಸಿ**
  ಭಟ್ರೇ, ಸ್ಮೈಲ್ ನ ಬೆಲೆ ಎಷ್ಟು?
  – **ಫೋಟೋ ತೆಗೆಸಿಕೊಳ್ಳುವಾಗ ಫ್ರೀ, ಆದರೆ ಹೆಂಡತಿ ನಕ್ಕಾಗ ಗಂಡನ ಜೇಬಿಗೆ ಕತ್ತರಿ!**

- **ಸರೋಜಾ ಪಾಟೀಲ, ಧಾರವಾಡ**
  ಸೋಮವಾರದ ವಿಶೇಷತೆ ಏನು?
  – **ರವಿವಾರದ ಹ್ಯಾಂಗೋವರ್ ಇಳಿಸುವ ಉಪಾಯ!**

- **ಅರುಣ ಸಿ ನಾಯ್ಡು, (ಇಮೇಲ್ ಮೂಲಕ)**
  ಭಟ್ರೇ, ಮದುವೆಗೂ, ಮೊಬೈಲ್‌ಗೂ ಇರುವ ವ್ಯತ್ಯಾಸ ಏನು?
  – **ಮೊಬೈಲ್ ಹ್ಯಾಂಗ್ ಆದ್ರೆ 'ರಿಸೆಟ್' ಮಾಡಬಹುದು, ಆದ್ರೆ ಮದುವೆ ಹ್ಯಾಂಗ್ ಆದ್ರೆ 'ಅಪ್ಡೇಟ್' ಆಗಲೇಬೇಕು!**

- **ನವೀನ ಭಟ್, ಹೊನ್ನಾವರ**
  ಭಟ್ರೇ, ಸ್ಕೂಲ್‌ನಲ್ಲಿ ಬೆಲ್ ಯಾಕೆ ಹೊಡೆಯುತ್ತಾರೆ?
  – **ಯಾಕಂದ್ರೆ, ಪಾಪ ಆ ಬೆಲ್‌ಗೆ ತನ್ನಷ್ಟಕ್ಕೆ ತಾನು ಕೂಗಿಕೊಳ್ಳಲು ಬರಲ್ಲ!**

- **ಸೂರ್ಯ, ಕಾಗಿನೆಲೆ**
  ಭಟ್ರೇ, ಕೊನೆವರೆಗೂ ನಮ್ಮ ಜತೆ ಇರುವ ಪ್ರೀತಿ ಯಾವುದು?
  – **'ಶಾಪಿಂಗ್' ಮೇಲೆ ನಮಗಿರುವ ಪ್ರೀತಿ!**

- **ಬಸವರಾಜ ಹೊನ್ನಳ್ಳಿ, ಗದಗ**
  ಭಟ್ರೇ, ಸಾಲ ಕೊಡುವವರಿಗೂ, ಸಾಲ ಪಡೆಯುವವವರಿಗೂ ವ್ಯತ್ಯಾಸ ಏನು?
  – **ಸಾಲ ಕೊಟ್ಟವನಿಗೆ ನೆನಪು ಜಾಸ್ತಿ, ಸಾಲ ಪಡೆದವನಿಗೆ ಮರೆವು ಜಾಸ್ತಿ!**

- **ಶಂಕರ ಪಾಟೀಲ, ಹುಬ್ಬಳ್ಳಿ**
  ಬ್ರಹ್ಮಚಾರಿಗಳಿಗೂ, ವಿವಾಹಿತರಿಗೂ ಇರುವ ವ್ಯತ್ಯಾಸ ಏನು?
  – **ಬ್ರಹ್ಮಚಾರಿಗಳು ಹೋಟೆಲ್‌ನಲ್ಲಿ ತಿಂದು ಮನೆಯಲ್ಲಿ ನಿದ್ದೆ ಮಾಡ್ತಾರೆ, ವಿವಾಹಿತರು ಮನೆಯಲ್ಲಿ ತಿಂದು ಹೋಟೆಲ್‌ನಲ್ಲಿ ನಿದ್ದೆ ಮಾಡುವ ಕನಸು ಕಾಣ್ತಾರೆ!**

- **ರಘು, ಕುಣಿಗಲ್**
  ಭಟ್ರೇ, ಪರೀಕ್ಷೆ ಅಂದ್ರೆ ಏನು?
  – **ಓದಿದ್ದು ನೆನಪಿದೆಯಾ ಅಂತ ಚೆಕ್ ಮಾಡೋದಲ್ಲ, ಎಷ್ಟು ಹೊತ್ತು ನಿದ್ದೆ ತಡೆದುಕೊಳ್ಳಬಹುದು ಅಂತ ಚೆಕ್ ಮಾಡೋದು!**

# ರಬ್ಬರ್: ಅಬ್ಬರ ಮತ್ತು ಅವನತಿ

**ರಬ್ಬರ್ ಮೊದಲು ಬಂದುದು ದಕ್ಷಿಣ ಕನ್ನಡದ ಸುಳ್ಯ ತಾಲೂಕಿಗೆ. ಇಲ್ಲಿನ ದೊಡ್ಡತೋಟ, ದುಗಲಡ್ಕ, ನೆಲ್ಯಾಡಿ ಭಾಗದಲ್ಲಿ ವ್ಯಾಪಕವಾಗಿ ಕಾಡು ಕಡಿದು ಸರಕಾರವೇ ನೆಡುತೋಪುಗಳನ್ನು ಸೃಷ್ಟಿಸಿತು. ನಂತರ ಬೆಳ್ತಂಗಡಿಯ ಹಲವು ಭಾಗಗಳಲ್ಲಿ ರಬ್ಬರ್ ತೋಟಗಳು ಸೃಷ್ಟಿಯಾದವು. ಕಾರ್ಕಳ, ಪುತ್ತೂರು, ಹೀಗೆ ಎಲ್ಲ ತಾಲೂಕುಗಳೂ ರಬ್ಬರ್‌ಮಯವಾದವು. ಈ ನೂರಾರು ಎಕರೆ ರಬ್ಬರು ಕೂಪುಗಳಿಗೆ ಎಲೆ ಉದುರು ರೋಗ, ಕಪ್ಪು ಚುಕ್ಕೆ ರೋಗ ಅಮರಿಕೊಳ್ಳುತ್ತಿದ್ದವು.**



ಕಾಡುದಾರಿ
ಹರೀಶ್ ಕೇರ
vveditoped@gmail.com

ಎಪ್ಪತ್ತರ ದಶಕದವರೆಗೂ ದಕ್ಷಿಣ ಕನ್ನಡ ಜಿಲ್ಲೆ ಭತ್ತದ ಗದ್ದೆಗಳಿಂದ ಕಂಗೊಳಿಸುತ್ತಿತ್ತು. ನಂತರ ಅಡಿಕೆ, ತೆಂಗಿನ ತೋಟಗಳು, ಅವುಗಳ ನಡುವೆ ಕಾಳುಮೆಣಸು ಬಳ್ಳಿ, ಕಾಫಿ, ಕೋಕೋ ಗಿಡಗಳು ಬಂದವು. ಅಲ್ಲಲ್ಲಿ ತರಕಾರಿ, ಹಣ್ಣು ಮತ್ತು ಮಲ್ಲಿಗೆ ಹೂವು. ಬೆರಳೆಣಿಕೆಯಷ್ಟು ಮಾವಿನ ತೋಪುಗಳು. ಎಂಬತ್ತರ ದಶಕದಲ್ಲಿ ಇಲ್ಲಿ ಗದ್ದೆ ಬೇಸಾಯ ಕಡಿಮೆಯಾಗತೊಡಗಿತು. ಹೊಸ ಬೆಳೆಯೊಂದು ಇಲ್ಲಿಗೆ ಆಗಮಿಸಿತು– ರಬ್ಬರ್. ಅದು ದಕ್ಷಿಣದ ಕೇರಳದ ಕಡೆಯಿಂದ ಯಶಸ್ವಿ ಅನ್ನಿಸಿಕೊಂಡು ಬಂತು. ಕೇರಳದ ಹಾಗೂ ತಮಿಳುನಾಡಿನ ಕ್ರಿಶ್ಚಿಯನ್ನರು ಈ ಬೆಳೆಯ ಹೊಣೆ ಹೊತ್ತಿದ್ದರು. ಅವರನ್ನು ನಾವು ಕೊಚ್ಚಿ ಕ್ರಿಶ್ಚಿಯನ್ಸ್ ಎಂದು ಕರೆಯುತ್ತಿದ್ದೆವು. ವಿಚಿತ್ರವೆಂದರೆ ಕ್ರೈಸ್ತರಲ್ಲದವರೂ ಈ ಗುಂಪಿನಲ್ಲಿದ್ದರು. ವಿರುದ್ದಾಸಲಂ, ಉದಯಮುತ್ತು, ಯೇಸುಮಗನ್, ಅರುಳ್ದಾಸ್, ಇನಿಯನ್ ಎಂಬುದೆಲ್ಲ ಆಗ ನಮಗೆ ವಿಚಿತ್ರ ಹೆಸರುಗಳು.

ರಬ್ಬರ್ ಮೊದಲು ಬಂದುದು ದಕ್ಷಿಣ ಕನ್ನಡದ ಸುಳ್ಯ ತಾಲೂಕಿಗೆ. ಇಲ್ಲಿನ ದೊಡ್ಡತೋಟ, ದುಗಲಡ್ಕ, ನೆಲ್ಯಾಡಿ ಭಾಗದಲ್ಲಿ ವ್ಯಾಪಕವಾಗಿ ಕಾಡು ಕಡಿದು ಸರಕಾರವೇ ನೆಡುತೋಪುಗಳನ್ನು ಸೃಷ್ಟಿಸಿತು. ನಂತರ ಬೆಳ್ತಂಗಡಿಯ ಹಲವು ಭಾಗಗಳಲ್ಲಿ ರಬ್ಬರ್ ತೋಟಗಳು ಸೃಷ್ಟಿಯಾದವು. ಕಾರ್ಕಳ, ಪುತ್ತೂರು, ಹೀಗೆ ಎಲ್ಲ ತಾಲೂಕುಗಳೂ ರಬ್ಬರ್‌ಮಯವಾದವು. ಈ ನೂರಾರು ಎಕರೆ ವಿಸ್ತೀರ್ಣದ ರಬ್ಬರು ಕೂಪುಗಳಿಗೆ ಎಲೆ ಉದುರು ರೋಗ, ಕಪ್ಪು ಚುಕ್ಕೆ ರೋಗಗಳೆಲ್ಲ ಅಮರಿಕೊಳ್ಳುತ್ತಿದ್ದವು. ಆಗ ಮಳೆಗಾಲದ ಮೊದಲು ಮರಗಳ ಮೇಲಿನಿಂದ ಕೀಟನಾಶಕ ದ್ರಾವಣ ಸಿಂಪಡಿಸಲಾಗುತ್ತಿತ್ತು. ಆಗಿನ ಚಿಕ್ಕ ಮಕ್ಕಳಿಗೆ ಅದೊಂದು ಅದ್ಭುತ ದೃಶ್ಯ. ಹೆಲಿಕಾಪ್ಟರ್‌ನಿಂದ ತಂದು ಸಿಂಪಡಿಸಲಾಗುತ್ತಿತ್ತು. ಆಗ ತಾಲೂಕು ಕೇಂದ್ರದಲ್ಲಿ ಮಾತ್ರ ಇದ್ದ ಹೆಲಿಪ್ಯಾಡ್‌ಗಳಲ್ಲಿ ಕೀಟನಾಶಕ ತುಂಬಿಕೊಂಡು ಹೆಲಿಕಾಪ್ಟರ್‌ಗಳು ಕೂಪುಗಳಿದ್ದ ಕಡೆಗೆ ಬೊರೋಂ ಎಂದು ಸದ್ದು ಮಾಡುತ್ತ ಬಂದು ಸುತ್ತು ಹಾಕುತ್ತ ತುಂತುರು ಮಳೆ ಸುರಿದಂತೆ ಬೋರ್ಡೋ ಮಿಕ್ಸ್ ಮತ್ತಿತರ ಮದ್ದು ಸಿಂಪಡಿಸಿ ಹೊರಟುಹೋಗುತ್ತಿದ್ದವು. ಅಷ್ಟು ಹತ್ತಿರದಿಂದ ನಮಗೆಲ್ಲ ಹೆಲಿಕಾಪ್ಟರ್ ಕಾಣಲು ಸಿಕ್ಕಿದ್ದು ಅದೇ ಮೊದಲು.

ಆಗ ಅಡಿಕೆ ತೆಂಗಿಗೆ ತೃಪ್ತಿಪಟ್ಟುಕೊಂಡಿದ್ದ ಕೃಷಿಕರನ್ನು 'ನೀವೂ ರಬ್ಬರ್ ಪ್ರಯತ್ನಿಸಿ' ಎಂದು ಪುಸಲಾಯಿಸಿದರು. ಮೊದಮೊದಲು ರಬ್ಬರ್ ಬೆಳೆಯಲು ಕೃಷಿಕರಲ್ಲಿ ಅಷ್ಟೊಂದು ಉತ್ಸಾಹ ಇರಲಿಲ್ಲ. ಯಾಕೆಂದರೆ ರಬ್ಬರ್‌ಗೆ ಆಗಿನ್ನೂ ಸ್ಥಳೀಯ ಮಾರುಕಟ್ಟೆ ಸೃಷ್ಟಿಯಾಗಿರಲಿಲ್ಲ. ಅಡಿಕೆ ಮಧ್ಯೆ ಕೋಕೋ – ಕಾಳುಮೆಣಸು ಬೆಳೆದಂತೆ ಎಡೆಬೆಳೆಯನ್ನು ರಬ್ಬರ್ ಗಿಡಗಳ ನಡುವೆ ಬೆಳೆಯಲಾಗುವುದಿಲ್ಲ. ಆಮೇಲೆ, ಅದು ಮಣ್ಣಿನ ಜೀವಸತ್ವವನ್ನೆಲ್ಲ ಹೀರಿಕೊಳ್ಳುತ್ತದೆ ಎಂಬ ಭಯ. ನಿಧಾನವಾಗಿ ಈ ಆತಂಕಗಳೆಲ್ಲ ಮಾಯವಾಗಿ, ಆ ಜಾಗದಲ್ಲಿ ಅದು ತರುವ ಹಣದ ಚಿತ್ರಣ ಮೂಡತೊಡಗಿತು. ಅಡಿಕೆ ತೋಟಗಳ ಸುತ್ತಮುತ್ತ ಖಾಲಿ ಜಾಗ ಇದ್ದ ಎಲ್ಲರೂ ರಬ್ಬರ್ ಗಿಡ ಹಾಕಿದರು. ಅದು ಬೆಳೆದು ಲ್ಯಾಟೆಕ್ಸ್ ನೀಡಲು ಐದಾರು ವರ್ಷ ತೆಗೆದುಕೊಳ್ಳುತ್ತದೆ. ನಂತರ ಇಪ್ಪತ್ತು ವರ್ಷ ಇಳುವರಿ ನೀಡುತ್ತದೆ. ಆರಂಭದ ಐದು ವರ್ಷ ನೀರು, ಮದ್ದು ಕೊಟ್ಟು ಸಾಕಿದರೆ ಸಾಕು. ನಂತರ ಮೇಂಟೇನೆನ್ಸ್ ಎಂಬುದೇನೂ ಇಲ್ಲ. ಮಳೆಗಾಲದಲ್ಲಿ ಲ್ಯಾಟೆಕ್ಸ್ ಸಂಗ್ರಹಿಸುವ ಭಾಗಕ್ಕೆ ಪ್ಲಾಸ್ಟಿಕ್ ಆವರಣ ಕಟ್ಟುವುದೊಂದು ಹೊರತುಪಡಿಸಿದರೆ ಇನ್ನೇನೂ ಖರ್ಚಿಲ್ಲ ಎಂಬುದು ಇದರ ಆಕರ್ಷಕ ಭಾಗ.

ಎಂಬತ್ತು ತೊಂಬತ್ತರ ದಶಕಗಳು ದಕ್ಷಿಣ ಕನ್ನಡದಲ್ಲಿ ರಬ್ಬರ್‌ನ ವಿಜೃಂಭಣೆಯ ದಿನಗಳು. ರಬ್ಬರ್ ಮರದ ನಡುಭಾಗದಲ್ಲಿ ಗೀರು ಮಾಡಿ, ಅದರಿಂದ ಹೊರಸೂಸುವ ಲ್ಯಾಟೆಕ್ಸ್ (ಹಾಲು) ಒಂದು ಕರಟದಲ್ಲಿ ಸಂಗ್ರಹಿಸಲಾಗುತ್ತದೆ. ಅದನ್ನು ಒಂದೆರಡು ಗಂಟೆಗಳಲ್ಲಿ ತೆಗೆಯದಿದ್ದರೆ ಗಟ್ಟಿಯಾಗಿಬಿಡುತ್ತದೆ. ಹಾಲನ್ನು ಸಂಗ್ರಹಿಸಿ ಡ್ರಮ್‌ಗಳಲ್ಲಿ ಹಾಕಿ ಅದಕ್ಕೆ ಅಮೋನಿಯಾ ಹಾಕಿಟ್ಟರೆ, ಒಂದು ತಿಂಗಳವರೆಗೂ ಕೆಡುವುದಿಲ್ಲ. ಹಾಲನ್ನು ಟಂಬ್ಲರ್‌ಗಳಲ್ಲಿ ಸುರಿದು ಆಸಿಡ್ ಹಾಕಿದರೆ ಮರುದಿನಕ್ಕೆ ಮೆತ್ತನೆಯ ಹಾಳೆಯಾಗುತ್ತದೆ. ಆ ಹಾಳೆಯನ್ನು ಕಬ್ಬಿನ ಹಾಲು ತೆಗೆಯುವ ಮೆಷಿನ್‌ನಂಥ ಯಂತ್ರದಲ್ಲಿ ತುರುಕಿ ತೆಗೆದರೆ ಅಚ್ಚುಗಳುಳ್ಳ ರಬ್ಬರ್ ಶೀಟ್ ಸಿದ್ಧ. ಅದು ಹತ್ತು ದಿನ ಬಿಸಿಲಲ್ಲಿ ಅಥವಾ ಹೊಗೆಗೂಡಿನಲ್ಲಿ ಒಣಗಿ ಜೇನಿನ ಬಣ್ಣಕ್ಕೆ ಬಂದರೆ ಫಸ್ಟ್ ಕ್ಲಾಸ್ ಮೊದಲ ದರ್ಜೆ ರಬ್ಬರ್. ತೊಂಬತ್ತರ ದಶಕದಲ್ಲಿ ಇದರ ಕ್ರಯ ಕಿಲೋಗೆ ಮುನ್ನೂರರವರೆಗೂ ಹೋಯಿತು. ಹಾಲನ್ನೂ ಕೊಡುವವರಿದ್ದಾರೆ– ಅದರ ದರ ಬೇರೆ. ಹಾಲು ಕರಟದಿಂದ ತೆಗೆಯದಿದ್ದರೆ, ಅಥವಾ ತೆಗೆದ ಮೇಲೂ ಉಳಿದು ಗಟ್ಟಿಯಾದರೆ ಆ ಸ್ಕ್ರೇಪ್‌ಗೆ ಬೇರೆಯೇ ದರ.



ಈಗ ರಬ್ಬರು ಮಲೆನಾಡು– ಪಶ್ಚಿಮಘಟ್ಟದ ಬಹುತೇಕ ಜಿಲ್ಲೆಗಳನ್ನು ಆಕ್ರಮಿಸಿತು. ಒಂದೆರಡು ಎಕರೆ ಜಮೀನು ಹೊಂದಿದ ಸಣ್ಣ ರೈತರು ಕೂಡ ಮನೆ ಪಕ್ಕದಲ್ಲಿ ಹತ್ತಾರು ರಬ್ಬರ್ ಗಿಡ ನೆಟ್ಟು ತಾವೇ ಹಾಲು ತೆಗೆದು ಸ್ವಾಭಿಮಾನಿ ಬದುಕು ಬಾಳತೊಡಗಿದರು. ಅಡಿಕೆಗೆ ದರ ಕುಸಿದಾಗ ರಬ್ಬರ್, ರಬ್ಬರ್‌ಗೆ ಬೆಲೆ ಇಳಿದಾಗ ಅಡಿಕೆ ರೈತರನ್ನು ಮೇಲೆತ್ತಿ ಹಿಡಿಯಿತು. ಹೀಗಾಗಿ ದಕ್ಷಿಣ ಕನ್ನಡದ ಕೃಷಿಕರು ಎಂದಿಗೂ ಸಾಮೂಹಿಕವಾಗಿ ಬೆಳೆನಾಶ– ಬೆಲೆಕುಸಿತದ ದುರ್ಭರ ದಿನಗಳನ್ನು ಎದುರಿಸಲಿಲ್ಲ. ಸಣ್ಣ ಮನೆಗಳಲ್ಲಿ ಬೈಕುಗಳು, ಜೀಪುಗಳು, ದೊಡ್ಡವರ ಮನೆಗಳಲ್ಲಿ ಎಸ್‌ಯುವಿಗಳು ರಾರಾಜಿಸಿದವು. ಮದುವೆ ಮುಂಜಿ ಉಪನಯನಗಳೆಲ್ಲ ಬಹಳ ಗೌಜಿಯಾಗಿ ನಡೆಯತೊಡಗಿದವು. ಊರೊಟ್ಟಿನ ಜಾತ್ರೆ, ಕಂಬಳ, ಗುಡಿ ಬ್ರಹ್ಮಕಲಶ, ಹೊಸ ಶಾಲೆಗಳ ನಿರ್ಮಾಣ, ಭಜನಾ ಮಂದಿರ ಕಟ್ಟೋಣಗಳೆಲ್ಲ ಹೊಸ ರಂಗು ಪಡೆದುಕೊಳ್ಳತೊಡಗಿದವು. ಕೈಯಲ್ಲಿ ಸ್ವಲ್ಪ ಕಾಸು ಆಡತೊಡಗಿತು. ಕೃಷಿ ದಿನಗೂಲಿ ಮೌಲ್ಯ ಹೆಚ್ಚಿತು. ಇಂದು ರಾಜ್ಯದಲ್ಲೇ ಅತಿ ಹೆಚ್ಚು ಕೃಷಿ ದಿನಗೂಲಿ ನೀಡುವ ಜಿಲ್ಲೆ ದಕ, ಉಡುಪಿ. ವಿದ್ಯಾವಂತ ಮಕ್ಕಳು ರಾಜಧಾನಿ ಸೇರಿಕೊಂಡರೆ, ಅಷ್ಟೇನೂ ವಿದ್ಯೆ ಕಲಿಯದವರೆಲ್ಲ ತಮ್ಮೂರಿನಲ್ಲೇ ಒಂದೊಂದು ಗುಂಪು ಕಟ್ಟಿಕೊಂಡರು. ಕೆಲವರು ಕೇಸರಿ, ಕೆಲವರು ಹಸಿರು. ಗುಂಪು ಚಕಮಕಿಗಳು ಹೆಚ್ಚಾಗತೊಡಗಿದವು.

ಎಪ್ಪತ್ತರ ದಶಕದಲ್ಲೇ ದಕ್ಷಿಣ ಕನ್ನಡದ ಸುಳ್ಯ, ನೆಲ್ಯಾಡಿ, ಬೆಳ್ತಂಗಡಿಯ ಹಲವು ಕಡೆಗಳಲ್ಲಿ ಕೇರಳ– ತಮಿಳುನಾಡಿನ ಸಾವಿರಾರು ಜನರು ಬಂದು ಕಾಲನಿಗಳನ್ನು ಕಟ್ಟಿಕೊಂಡರು. ಇವರಲ್ಲಿ ಹೆಚ್ಚಿನವರು ಕ್ರೈಸ್ತರು ಹಾಗೂ ರಬ್ಬರ್ ಲ್ಯಾಟೆಕ್ಸ್ ತೆಗೆಯುವ ಕೆಲಸ ಮಾಡುತ್ತಿದ್ದವರು. ಇದೀಗ ಇವರ ಮೂರನೇ ತಲೆಮಾರು ಕೆಲಸ ಮಾಡುತ್ತಿದೆ. ಅಂದು ನೂರು ರೂಪಾಯಿ ದಿನಗೂಲಿ ಪಡೆದು ಹಾಲು ತೆಗೆಯುತ್ತಿದ್ದ ಇವರಿಗೆ ಈಗ ಸಿಕ್ಕಾಪಟ್ಟೆ ಬೇಡಿಕೆ. ಮುಂಜಾನೆ ಐದು ಗಂಟೆಯಿಂದ ಹತ್ತರವರೆಗೆ ಮಾತ್ರ ಕೆಲಸ. ಕಾರಣ ಬಿಸಿಲೇರುವ ಮೊದಲೇ ಹಾಲು ತೆಗೆಯಬೇಕು. ಹೀಗೆ ಬಂದವರು ಒಂದಾಗಿ ಬದುಕಿದರು. ಇಲ್ಲಿನ ಜನಜೀವನದೊಂದಿಗೂ ಹಾಲು ಜೇನಿನಂತೆ ಒಂದಾದರು. ತಮ್ಮದೇ ಪುಟ್ಟ ಚರ್ಚು, ಮಾರಿಗುಡಿ ಇತ್ಯಾದಿ ಕಟ್ಟಿಕೊಂಡರು. ನಿಧಾನವಾಗಿ ಇತರ ಉದ್ಯಮಗಳನ್ನು ಕಟ್ಟಿಕೊಂಡು ಹಣ ಮಾಡಿದವರೂ ಇದ್ದಾರೆ. ಆದರೆ ಎಂದೂ ಮೂಲನಿವಾಸಿಗಳನ್ನು ತಡಕಿಕೊಂಡು ತಗಾದೆ ಸೃಷ್ಟಿಸಲಿಲ್ಲ. ಅಕ್ಕಪಕ್ಕದ ಜಿಲ್ಲೆಗಳ ಕಾಫಿ– ಟೀ ತೋಟಗಳಿಗೆ ಬಂದ ಬಿಹಾರಿ– ಉಪ್ರ–ಮಪ್ರದವರಿಗೆ ಹೋಲಿಸಿದರೆ ಇವರಲ್ಲಿ ಕ್ರೈಮ್ ರೇಟ್ ಬಹಳಷ್ಟು ಕಡಿಮೆ. ಇವರ ಬದುಕಿನ ರೀತಿ, ಹಬ್ಬ ಹರಿದಿನಗಳೆಲ್ಲ ನಮಗಿಂತ ಭಿನ್ನವಾಗಿದ್ದವು. ಅದು ನಮಗೆ ಎದುರಾದ ಪುಟ್ಟದೊಂದು ಕಲ್ಚರ್ ಶಾಕ್. ಇಂದು ಅದೆಲ್ಲ ಸಾಮಾನ್ಯ ಸಂಗತಿ.

ವರ್ಷದ ಹಲವು ಋತುಗಳಲ್ಲಿ ನಾನಾ ಬಗೆಯಲ್ಲಿ ಅವತಾರ ತಾಳುವ ರಬ್ಬರ್ ತೋಟಗಳಲ್ಲಿ ಓಡಾಡುವುದೇ ಒಂದು ಆನಂದದ ಸಂಗತಿ. ಕೃಷಿಕರಲ್ಲದವರಿಗೆ ಅದರ ಆನಂದ ಗೊತ್ತಾಗಲಾರದು. ಬೇಸಿಗೆಯಲ್ಲಿ ಮರಗಳೆಲ್ಲ ಎಲೆಗಳನ್ನು ಉದುರಿಸಿ ಭೂಮಿಯಿಂದ ಹೀರಿದ ನೀರನ್ನು ಕಾಂಡಗಳಿಗಾಗಿ ಇಟ್ಟುಕೊಂಡಿರುತ್ತವೆ. ಆಗ ಹಾಲಿನ ಇಳುವರಿ ಕಡಿಮೆ. ಮಳೆಗಾಲದಲ್ಲಿ ಹಾಲು– ನೀರು ಮಿಕ್ಸ್ ಆಗಿಬಿಡುವ ಸಂಭವ ಹೆಚ್ಚು– ಹೀಗಾಗಿ ಕರಟಗಳಿಗೆ ಪ್ಲಾಸ್ಟಿಕ್ ಹೊದಿಕೆ. ಸೆಪ್ಟೆಂಬರ್ ಅಕ್ಟೋಬರ್‌ನಲ್ಲಿ ಮರಗಳೆಲ್ಲ ತಲೆತುಂಬ ಎಲೆಗಳನ್ನು ದಟ್ಟವಾಗಿ ಧರಿಸಿಕೊಂಡು, ದಟ್ಟ ಕಾಡಿನ ಒಳಗೆ ಹೊಕ್ಕ ಅನುಭವ ನೀಡುತ್ತವೆ. ಲ್ಯಾಟೆಕ್ಸ್‌ನ ಪರಿಮಳ ವಿಶಿಷ್ಟವಾದದ್ದು. ಅದು ರಬ್ಬರ್ ತೋಟ ಇಲ್ಲಿದೆ ಎಂದು ಕಾಲು ಕಿಲೋಮೀಟರ್ ದೂರದಿಂದಲೇ ನಮ್ಮ ಮೂಗಿಗೆ ಅರಿವು ಮೂಡಿಸುತ್ತದೆ. ಮರದ ಕಾಂಡಕ್ಕೆ ಗೀರೆಳೆದು ಹಾಲು ಇಳಿಸುವುದೊಂದು ಬಲು ನಾಜೂಕಾದ ಕಾಯಕ. ಅದು ಹೆಚ್ಚು ಆಳವೂ ಮೇಲುಮೇಲಿನದೂ ಆಗಬಾರದು. ಮರವನ್ನು ಗೀರಿ ತೆಗೆದ ಕಾಂಡದ ಸಿಪ್ಪೆಗಳು, ಶಾರ್ಪ್‌ನರ್‌ಲ್ಲಿ ಪೆನ್ಸಿಲ್ ಅನ್ನು ಹೆರೆದು ಮೊನಚು ಮಾಡುವಾಗ ಎದ್ದು ಬರುವ ಸಿಪ್ಪೆಯಂತೆಯೇ ಸೊಗಸು. ಅದನ್ನೇ ಸಂಗ್ರಹಿಸಿ ಒಲೆಗೆ ಒಟ್ಟುವವರೂ ಇದ್ದಾರೆ.

ರಬ್ಬರ್ ಬೀಜಗಳು ಆರಂಭದಲ್ಲಿ ನಮಗೆ ಗಾಬರಿ ಹುಟ್ಟಿಸಿದ್ದವು. ಒಂದೊಂದು ಮರದಲ್ಲೂ ನೂರಾರು ಕಾಯಿ ಬಿಡುತ್ತಿದ್ದವು. ಇವು ತ್ರಿದಳ ಧಾನ್ಯದಂತೆ ಮೂರು ವಿಭಾಗದ್ದು. ಒಂದೊಂದರಲ್ಲೂ ಒಂದೊಂದು ಬೀಜ. ಬೇಸಿಗೆಯಲ್ಲಿ ಇವು ಒಣಗಿ, ನಡುಹಗಲಲ್ಲಿ ಫಟ್ಟನೆ ಸಿಡಿದುಬಿಡುತ್ತಿದ್ದವು. ಹಾಗೆ ಒಂದು ಮರದಿಂದ ಸಿಡಿದಾಗ ಇನ್ನೊಂದು ಮರಕ್ಕೋ ಬೀಜಕ್ಕೋ ತಾಕಿ, ಅದೂ ಫಟ್ಟೆಂದು ಸಿಡಿದು, ಅದು ಇನ್ನೊಂದಕ್ಕೆ ಬಡಿದು ಇಡೀ ತೋಟ ಫಟ್ಫಟ್ ಶಬ್ದಮಯವಾಗಿಬಿಡುತ್ತದೆ. ಕೆಲವೊಮ್ಮೆ ರಾತ್ರಿಯಲ್ಲೂ ಹೀಗೆ ಸಿಡಿಯುವುದಿದೆ. ನಮಗಿದೆಲ್ಲ ಗೊತ್ತಿಲ್ಲದ ಆರಂಭ ಕಾಲದಲ್ಲಿ, ಮಲೆನಾಡಿನ ಕಾಡಿನ ನಡುವೆ, ನಡುರಾತ್ರಿ ಇದ್ದಕ್ಕಿದ್ದಂತೆ ಇಡೀ ತೋಟ ಫಟ್ಫಟ್ ಎಂದು ಸದ್ದು ಮಾಡತೊಡಗಿದರೆ ಹೇಗಾಗಬೇಡ? ಇಲ್ಲದ ದೆವ್ವ ಪಿಶಾಚಿಗಳೆಲ್ಲಾ ತಲೆಯಲ್ಲಿ ಪ್ರತ್ಯಕ್ಷವಾಗಿಬಿಡುತ್ತಿದ್ದವು.

ಏನನ್ನೋ ಬರೆಯಬೇಕಾಗಿತ್ತು. ನೆನಪುಗಳು ನುಗ್ಗಿ ಬಂದವು. ಹೇಳಬೇಕಾಗಿದ್ದುದು ಇದು– 2010–20ರ ನಡುವೆ ರಬ್ಬರ್ ಬೆಲೆ ಸಮೃದ್ಧಿ ಮುಟ್ಟಿತ್ತು. ಈಗ ಅದರ ಅರ್ಧ ದರಕ್ಕೆ ಇಳಿದಿದೆ. ಕಾರಣ, ಇಂಡೋನೇಷ್ಯಾ, ವಿಯೆಟ್ನಾಮ್, ಥಾಯ್ಲೆಂಡ್‌ಗಳಿಂದ ರಬ್ಬರ್ ಆಮದು ಮಾಡಿಕೊಳ್ಳಲಾಗುತ್ತಿದೆ. ಕಿಲೋಗೆ ಕನಿಷ್ಠ 258 ರು. ಆದರೂ ಬೆಂಬಲ ಬೆಲೆ ನೀಡಬೇಕು ಎಂಬುದು ಬೆಳೆಗಾರರ ಬೇಡಿಕೆ. ಕುಶಲಿ ಕೆಲಸಗಾರರೂ ಈಗ ಕಡಿಮೆ. ಇರುವವರಿಗೆ ಬಹಳ ಬೇಡಿಕೆ ಮತ್ತು ದುಬಾರಿ ದರ. ಕೆಲವೆಡೆ 60:40 ದರ. ಅಂದರೆ ಹಾಲು ತೆಗೆದುಕೊಟ್ಟು ಹೋಗುವವನಿಗೆ ಅದರ 60 ಶೇಕಡ, ರಬ್ಬರ್ ಬೆಳೆದ ಮಾಲೀಕನಿಗೆ 40 ಶೇಕಡ ದುಡ್ಡು. ಇಂಥ ಅವೈಜ್ಞಾನಿಕ ಪರಿಸ್ಥಿತಿ ಬೇರೆ ಎಲ್ಲೂ ಇರಲಿಕ್ಕಿಲ್ಲ. ದೇಶದಲ್ಲಿ ಕರ್ನಾಟಕವೇ ರಬ್ಬರ್ ಬೆಳೆಗೆ ತೃತೀಯ ಸ್ಥಾನಿ, ರಾಜ್ಯದಲ್ಲಿ ದಕ್ಷಿಣ ಕನ್ನಡವೇ ಮೊದಲ ಸ್ಥಾನಿ. ಎತ್ತರ ತಲುಪಿದ ಒಂದು ಬೆಳೆ, ಬೆಲೆ ಬೀಳುವುದು ಎಂದರೆ ಒಂದು ಸಮಾಜ, ಸಮುದಾಯ, ಜನಜೀವನ ಎಲ್ಲ ಹಳ್ಳ ಹಿಡಿಯುವುದೆಂದೇ ಅರ್ಥ. ಇನ್ನಷ್ಟು ಈ ಬಗ್ಗೆ ಹೇಳಲಿದೆ– ಅದೆಲ್ಲ ಇನ್ನೊಮ್ಮೆ.

## ಓದುಗರ ಓಣಿ
ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ತರಕಾರಿಗಳಲ್ಲಿ ಅಪಾಯಕಾರಿ ಅಂಶ: ವಿಶ್ವವಾಣಿ ವರದಿ ಮಾಹಿತಿ ಪೂರ್ಣ

ವಿಶ್ವವಾಣಿಯ ಫೆ.25ರ ಸಂಚಿಕೆಯಲ್ಲಿ ಪ್ರಕಟವಾದ 'ತರಕಾರಿಗಳಲ್ಲಿ ಅಪಾಯಕಾರಿ ಅಂಶ' ಎಂಬ ತಲೆಬರಹದ ಬಂದ ಸುದ್ದಿ ಮಾಹಿತಿಪೂರ್ಣವಾಗಿದೆ ಹಾಗೂ ಗಾಬರಿ ಹುಟ್ಟಿಸುವಂತಿದೆ. ಮೊದಲೆಲ್ಲ ಸಾವಯವ ಕೃಷಿಯಿಂದಾಗಿ ಆರೋಗ್ಯಕರ ತರಕಾರಿ, ಅಕ್ಕಿ, ಬೇಳೆ, ಮುಂತಾದ ಸಾಮಾನುಗಳು ಸಿಗುತ್ತಿದ್ದವು. ಆದರೆ ಹಸಿರು ಕ್ರಾಂತಿ, ಬಿಳಿಕ್ರಾಂತಿ, ಮುಂತಾದ ಹೆಸರಿನಲ್ಲಿ ಎಲ್ಲಾ ರೀತಿಯ ಬೆಳೆಗಳು ಬೆಳೆಯುವುದಕ್ಕೆ ಮಿತಿಯಿಲ್ಲದೆ, ರಾಸಾಯನಿಕ ಗೊಬ್ಬರ ಉಪಯೋಗಿಸಿ ಮಣ್ಣು, ಜಲ, ಎಲ್ಲವನ್ನು ಅಶುದ್ಧಗೊಳಿಸಲಾಗಿದೆ. ಅದೇ ರೀತಿ ಹಸು ಎಮ್ಮೆಗಳು ಶುದ್ಧವಾದ ಹಾಲನ್ನು ಕೊಡುತ್ತಿದ್ದವು. ಆದರೆ ಹಾಲಿನ ಉತ್ಪಾದನೆ ಜಾಸ್ತಿ ಮಾಡಲು ನಾವು ಮಾಡಿದ್ದೇನು? ಅವುಗಳಿಗೆ ಹಾರ್ಮೋನ್ ಚುಚ್ಚುಮದ್ದನ್ನು ಕೊಟ್ಟು, ಅವು ಕೊಡುತ್ತಿದ್ದ ಹಾಲನ್ನು ಕಲುಷಿತಗೊಳಿಸಿದ್ದೇವೆ. ಇವೆಲ್ಲಾ ಸರಕಾರಿ ಪ್ರಾಯೋಜಿತವಾಗಿದ್ದರಿಂದ ಪ್ರಜೆಗಳು ಅದರ ಧನಾತ್ಮಕ ಅಥವ ಋಣಾತ್ಮಕ ಅಂಶಗಳನ್ನು ಪರಿಗಣಿಸದೆ ಒಪ್ಪಿಕೊಂಡು ಅಳವಡಿಸಿಕೊಂಡಿದ್ದರಿಂದ ನಾವು ಈಗ ಅಪಾಯಕಾರಿ ಹಂತ ತಲುಪಿದ್ದೇವೆ. ಇನ್ನೊಂದು ವಿಷಯ, ಮಣ್ಣು, ನೀರು, ಎಲ್ಲಾ ಕಲುಷಿತವಾಗಿರುವಾಗ ಸಾವಯವ ತರಕಾರಿ, ಬೇಳೆ, ಹಾಲು, ಎಂದು ಮಾರಾಟ ಆಗುತ್ತಿರುವ ಸಾಮಾನುಗಳು ನಿಜವಾಗಲೂ ಎಷ್ಟರಮಟ್ಟಿಗೆ ಅಪಾಯಕಾರಿ ಅಲ್ಲ ಎಂದು ಸರಕಾರ ಪತ್ತೆಮಾಡಿಸಿ ವರದಿ ಬಹಿರಂಗಪಡಿಸಿದರೆ ಸಾರ್ವಜನಿಕರಿಗೆ ಅನುಕೂಲ ಆಗುತ್ತದೆ. ಸರಕಾರ ಈ ಕಡೆ ಅದಷ್ಟು ಬೇಗ ಗಮನ ಹರಿಸುತ್ತದೆ ಎಂದು ನಂಬೋಣವೇ? ಹಾಗೂ ಈ ಅಪಾಯಕಾರಿ ವಸ್ತು ಸ್ಥಿತಿಯಿಂದ ಹೊರಬರಲು ಸರಕಾರ (ಕೇಂದ್ರ/ರಾಜ್ಯ) ಕ್ರಮಗೊಳ್ಳಲೇ ಬೇಕು ಎಂದು ಈ ಮೂಲಕ ಆಗ್ರಹಿಸುತ್ತೇನೆ.

**-ಮುಕುಂದ ದಾವಣಗೆರೆ**

### ಮುಖ್ಯಮಂತ್ರಿಗಳೇ ಹುದ್ದೆ ಭರ್ತಿ ಮಾಡಿ

ಕಳೆದ 3 ವರ್ಷಗಳಿಂದ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ 2.84 ಲಕ್ಷಕ್ಕೂ ಹೆಚ್ಚು ಹುದ್ದೆಗಳಿದ್ದು ನಾನಾ ಕಾರಣಗಳಿಗೆ ನೇಮಕಾತಿ ವಿಳಂಬವಾಗುತ್ತಿರುವ ಕಾರಣ ಸಾವಿರಾರು ಅಭ್ಯರ್ಥಿಗಳು ಈಗಾಗಲೇ ಸಾಕಷ್ಟು ಬಾರಿ ಬೀದಿಗಿಳಿದು ಪ್ರತಿಭಟನೆ ನಡೆಸಿದ್ದಾರೆ. ಅದರ ಮುಂದುವರಿದು ಸರ್ಕಾರದಿಂದ ಯಾವುದೇ ರೀತಿಯ ಸಕಾರಾತ್ಮಕ ಸ್ಪಂದನೆ ಸಿಗದ ಕಾರಣ ಮತ್ತೊಮ್ಮೆ ವಿದ್ಯಾರ್ಥಿಗಳು ತಾಳ್ಮೆ ಕಳೆದುಕೊಂಡು ಹಿಂದಿಗಿಂತಲೂ ದೊಡ್ಡ ಮಟ್ಟದಲ್ಲಿ ವಿದ್ಯಾಕಾಶಿ ಧಾರವಾಡದಲ್ಲಿ ಅನಿರೀಕ್ಷಿತವಾಗಿ ಪ್ರತಿಭಟನೆ ಮಾಡಬೇಕಾಯ್ತು. ಧಾರವಾಡ, ವಿಜಯಪುರ ಹಾಗೂ ಬೆಂಗಳೂರಿನಂತಹ ನಗರಗಳಲ್ಲಿ ಹಲವಾರು ವರ್ಷಗಳಿಂದ ತಮ್ಮ ಪೋಷಕರು ಹಾಗೂ ಕುಟುಂಬದವರನ್ನು ಬಿಟ್ಟು ಸಾಲಸೂಲ ಮಾಡಿ ಓದುತ್ತಿದ್ದಾರೆ. ಸಾಲದಕ್ಕೆ ಸ್ವಿಗ್ಗಿ, ಝೊಮ್ಯಾಟೋ ಹಾಗೂ ಹೋಟೆಲ್‌ಗಳಲ್ಲಿ ಕೆಲಸ ಮಾಡುವುದರ ಜೊತೆಗೆ ದಿನಗಳನ್ನು ಕಳೆಯುತ್ತಿದ್ದಾರೆ. ಇತ್ತ ತಂದೆ ತಾಯಿಗಳಿಗೆ ಏನ್ ಹೇಳಬೇಕೆಂದು ಗೊತ್ತಾಗದೆ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ ಪರಿತಪಿಸುವಂತಾಗಿದೆ. ತಮ್ಮ ಮೊದಲ 2013–18ರ ಆಡಳಿತ ಅವಧಿಯಲ್ಲಿ ಅತೀ ಹೆಚ್ಚು ನೇಮಕಾತಿಗಳನ್ನು ಮಾಡಿಕೊಂಡಿರುವ ಶ್ರೇಯಸ್ಸು ತಮಗೆ ಸಲ್ಲುತ್ತದೆ. ಆದ್ದರಿಂದ, ಮಾನ್ಯಮುಖ್ಯಮಂತ್ರಿಗಳು ರಾಜ್ಯದ ಲಕ್ಷಾಂತರ ಯುವ ಸಮುದಾಯದ ಹಿತದೃಷ್ಟಿಯಿಂದ ಪಕ್ಷಾತೀತವಾಗಿ ಎಲ್ಲ ಸಮುದಾಯಗಳ ಮುಖಂಡರನ್ನು ವಿಶ್ವಾಸಕ್ಕೆ ಪಡೆದು ಮೀಸಲಾತಿಗೆ ಸಂಬಂಧಿಸಿದ ಎಲ್ಲ ಕಾನೂನು ತೊಡಕುಗಳು ಅಂತಿಮವಾಗಿ ಇತ್ಯಾರ್ಥವಾಗುವರೆಗೂ, ಹಳೆಯ 50% ಮೀಸಲಾತಿ ಮತ್ತು ರೋಸ್ಟರ್‌ನಡಿಯಲ್ಲೇ ನೇಮಕಾತಿಗಳನ್ನು ಪ್ರಾರಂಭಿಸುವಂತಾದರೆ ಆಡಳಿತವು ಸುಗಮವಾಗಿ ನಡೆಯುವುದಲ್ಲದೆ ಸ್ವಲ್ಪ ಮಟ್ಟಿಗೆ ನಿರುದ್ಯೋಗದ ಸಮಸ್ಯೆಯನ್ನು ಬಗೆಹರಿಸಿದಂತಾಗುತ್ತದೆ.

**-ಶಿವರಾಜ್ ನಡಗೇರಿ, ಕಲಬುರಗಿ.**

**ಓದುಗರ ಓಣಿಗೆ ಭೇಟಿ ಕೊಡಿ**
**ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು**

# ನಾಗರಿಕ ಸೇವಾ ಸುಧಾರಣೆ: ಮರುರಚನೆಗೆ ಕಾಲ ಬಂದಿದೆಯೇ?



ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಭಾರತದ ಆಡಳಿತಯಂತ್ರದ ಬೆನ್ನೆಲುಬು ಎಂದರೆ ನಾಗರಿಕ ಸೇವೆಗಳು. ಬ್ರಿಟಿಷರ ಕಾಲದಲ್ಲಿ ರೂಪುಗೊಂಡ ಆಡಳಿತ ಮಾದರಿ, ಸ್ವಾತಂತ್ರ್ಯಾನಂತರ ಭಾರತೀಯ ಸಂವಿಧಾನದ ಆವರಣದಲ್ಲಿ ಹೊಸ ರೂಪ ಪಡೆದುಕೊಂಡಿತು. ಭಾರತೀಯ ಆಡಳಿತ ಸೇವೆ, ಭಾರತೀಯ ಪೊಲೀಸ್ ಸೇವೆ, ಭಾರತೀಯ ವಿದೇಶಾಂಗ ಸೇವೆ ಸೇರಿದಂತೆ ಕೇಂದ್ರ ಮತ್ತು ರಾಜ್ಯಗಳ ವಿವಿಧ ಸೇವೆಗಳು ದೇಶದ ನೀತಿ ರೂಪಿಸುವುದರಿಂದ ಹಿಡಿದು ಜಾರಿಗೊಳಿಸುವ ತನಕ ಪ್ರಮುಖ ಪಾತ್ರವಹಿಸುತ್ತಿವೆ. 21ನೇ ಶತಮಾನದ ಭಾರತಕ್ಕೆ 19ನೇ ಶತಮಾನದ ಆಡಳಿತ ರಚನೆ ಸಾಕ್ಷಿಯಾಗಬಹುದೇ? ಸಿವಿಲ್ ಸರ್ವೀಸ್ ರಿಫಾರ್ಮ್ ಬರೀ ಚರ್ಚೆಯ ವಿಷಯವಲ್ಲ; ಇಂದಿನ ಅವಶ್ಯಕತೆಯ ಅವಿಭಾಜ್ಯ ಅಂಗವಾಗಿದೆ.

ಬ್ರಿಟಿಷರ ಕಾಲದಲ್ಲಿ ಐಸಿಎಸ್ ಅನ್ನು ಸ್ಟೀಲ್ ಫ್ರೇಮ್ ಆಫ್ ಇಂಡಿಯಾ ಎಂದು ಕರೆಯಲಾಗುತ್ತಿತ್ತು. ಉದ್ದೇಶ ಆಡಳಿತದ ನಿಯಂತ್ರಣ. ಸ್ವಾತಂತ್ರ್ಯಾನಂತರ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ನಾಗರಿಕ ಸೇವೆಗಳನ್ನು ರಾಷ್ಟ್ರೀಯ ಏಕತೆಯ ಸಾಧನವೆಂದು ಕರೆದರು. ಆದರೆ ಇಂದಿನ ಭಾರತದಲ್ಲಿ ಆಡಳಿತದ ಗುರಿ ನಿಯಂತ್ರಣವಲ್ಲ; ಸೇವೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆ. ತಂತ್ರಜ್ಞಾನ, ಡಿಜಿಟಲ್ ಆರ್ಥಿಕತೆ, ನಾಗರಿಕರ ಹೆಚ್ಚಿದ ಜಾಗೃತಿ–ಇವೆಲ್ಲವೂ ಆಡಳಿತದಿಂದ ಹೊಸ ರೀತಿಯ ಕಾರ್ಯಕ್ಷಮತೆಯನ್ನು ಬೇಡುತ್ತಿವೆ.

ನಾಗರಿಕ ಸೇವೆಗಳ ಪ್ರವೇಶದ್ವಾರವಾದ ಯುನಿಯನ್ ಪಬ್ಲಿಕ್ ಸರ್ವೀಸ್ ಕಮಿಷನ್ ನಡೆಸುವ ಪರೀಕ್ಷೆ ದೇಶದ ಅತ್ಯಂತ ಕಠಿಣ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು. ಜ್ಞಾನ, ವಿಶ್ಲೇಷಣಾ ಸಾಮರ್ಥ್ಯ ಮತ್ತು ವ್ಯಕ್ತಿತ್ವ ಪರೀಕ್ಷೆ – ಈ ಮೂರು ಹಂತಗಳ ಮೂಲಕ ಆಯ್ಕೆ ನಡೆಯುತ್ತದೆ. ಪ್ರಶ್ನೆ ಏನೆಂದರೆ, ಇಂದಿನ ಸವಾಲುಗಳಿಗೆ ಬೇಕಾದ ಕೌಶಲ್ಯಗಳು ಇದೇ ಪರೀಕ್ಷಾ ಮಾದರಿಯಿಂದ ಅಳೆಯಲ್ಪಡುತ್ತಿವೆಯೇ?

ಆಡಳಿತಕ್ಕೆ ಈಗ ಬೇಕಾಗಿರುವುದು ಡೇಟಾ ವಿಶ್ಲೇಷಣೆ, ಸಾರ್ವಜನಿಕ ಹಣಕಾಸಿನ ತಿಳಿವು, ತಂತ್ರಜ್ಞಾನ ಬಳಕೆ, ಸಂವಹನ ಕೌಶಲ್ಯ ಮತ್ತು ಸಾಮಾಜಿಕ ಸಂವೇದನೆ. ಪರೀಕ್ಷಾ ಮಾದರಿಯಲ್ಲಿ ಈ ಅಂಶಗಳ ತೂಕ ಹೆಚ್ಚಬೇಕೆಂಬ ವಾದ ಇದೆ. ಒಮ್ಮೆ ಆಯ್ಕೆಯಾದರೆ ಜೀವನಪೂರ್ತಿ ಭದ್ರತೆ ಎಂಬ ಮನೋಭಾವವನ್ನು ಬದಲಾಯಿಸುವಂತೆ, ನಿರಂತರ ಕೌಶಲ್ಯಾಭಿವೃದ್ಧಿ ಮತ್ತು ಕಾರ್ಯಕ್ಷಮತಾ ಮೌಲ್ಯಮಾಪನ ವ್ಯವಸ್ಥೆ ಬಲವಾಗಬೇಕು.

ಇಂದಿನ ಮೌಲ್ಯಮಾಪನ ಪದ್ಧತಿ ಬಹುತೇಕ ಆಂತರಿಕ ವರದಿ ಆಧಾರಿತ. ಪದೋನ್ನತಿ ಹಿರಿತನ ಆಧಾರಿತವಾಗಿರುವುದು ಸಾಮಾನ್ಯ. ಫಲಿತಾಂಶದ ಆಧಾರದ ಮೇಲೆ ಮೌಲ್ಯಮಾಪನ (Outcome-based appraisal) ಇನ್ನೂ ಸಂಪೂರ್ಣವಾಗಿ ಜಾರಿಯಾಗಿಲ್ಲ. ಒಂದು ಜಿಲ್ಲೆಯಲ್ಲಿ ಶಿಕ್ಷಣ, ಆರೋಗ್ಯ, ಪೌಷ್ಟಿಕತೆ, ಹೂಡಿಕೆ ಆಕರ್ಷಣೆ ಇವುಗಳಲ್ಲಿ ಕಂಡುಬರುವ ಸುಧಾರಣೆಗಳಿಗೆ ಅಧಿಕಾರಿಗಳ ಕಾರ್ಯಕ್ಷಮತೆ ಮಾನದಂಡವಾಗಬೇಕು. ಇಲ್ಲದಿದ್ದರೆ, ಸ್ಥಾನಾಂತರವೇ ಏಕೈಕ ಪ್ರತಿಕ್ರಿಯೆಯಾಗುತ್ತದೆ.

ಕೇಂದ್ರ ಸರ್ಕಾರವು ಕೆಲವು ವರ್ಷಗಳಿಂದ ಲ್ಯಾಟರಲ್ ಎಂಟ್ರಿ ಮೂಲಕ ಖಾಸಗಿ ಕ್ಷೇತ್ರದ ತಜ್ಞರನ್ನು ಸಂಯುಕ್ತ ಕಾರ್ಯದರ್ಶಿ ಮಟ್ಟದಲ್ಲಿ ನೇಮಕ ಮಾಡುತ್ತಿದೆ. ಆಧುನಿಕ ನೀತಿ ನಿರ್ಮಾಣಕ್ಕೆ ತಜ್ಞ ಜ್ಞಾನ ಅಗತ್ಯ ಎಂಬುದು ಬೆಂಬಲಿಗರ ವಾದವಾಗಿದ್ದರೆ, ಇದು ಸೇವಾ ಮನೋಭಾವ ಮತ್ತು ನಿರಪೇಕ್ಷತೆಯನ್ನು ದುರ್ಬಲಗೊಳಿಸಬಹುದೇ? ವಿರೋಧಿಗಳ ಆತಂಕವಾಗಿದೆ.

ಸತ್ಯ ಏನೆಂದರೆ, ಆಡಳಿತದಲ್ಲಿ ಸಾಮಾನ್ಯಜ್ಞ (generalist) ಮತ್ತು ತಜ್ಞ (specialist)ರ ಸಮತೋಲನ ಅಗತ್ಯ. ಹವಾಮಾನ ಬದಲಾವಣೆ, ಸೈಬರ್ ಸುರಕ್ಷತೆ, ಹಣಕಾಸು ತಂತ್ರಜ್ಞಾನ ಇವುಗಳಲ್ಲಿ ತಜ್ಞತೆ ಅನಿವಾರ್ಯ. ಆದ್ದರಿಂದ ಲ್ಯಾಟರಲ್ ಎಂಟ್ರಿ ಎಂಬುದು ಪಾರದರ್ಶಕ, ಸ್ಪರ್ಧಾತ್ಮಕ ಮತ್ತು ಮೌಲ್ಯಾಧಾರಿತವಾಗಿರಬೇಕು. ಭಾರತದ ಸಂಯುಕ್ತ ವ್ಯವಸ್ಥೆಯಲ್ಲಿ ಅಧಿಕಾರಿಗಳ ಪಾತ್ರ ರಾಜಕೀಯ ನಾಯಕರಿಗೆ ಸಲಹೆ ನೀಡುವುದು ಮತ್ತು ನೀತಿಗಳನ್ನು ಜಾರಿಗೊಳಿಸುವುದು. ಆದರೆ ಕೆಲವೊಮ್ಮೆ ರಾಜಕೀಯ ಹಸ್ತಕ್ಷೇಪದ ಆರೋಪಗಳು ಕೇಳಿಬರುತ್ತವೆ. ಪದೇ ಪದೇ ವರ್ಗಾವಣೆ, ನಿರ್ಧಾರ ಸ್ವಾತಂತ್ರ್ಯದ ಕೊರತೆ ಇವು ಕಾರ್ಯಕ್ಷಮತೆಯನ್ನು ದುರ್ಬಲಗೊಳಿಸುತ್ತವೆ. ಆಡಳಿತದ ನಿರಪೇಕ್ಷತೆಯನ್ನು ಕಾಪಾಡಲು ನಿಶ್ಚಿತ ಅವಧಿಯ ಹುದ್ದೆಗಳು (fixed tenure) ಕಟ್ಟುನಿಟ್ಟಾಗಿ ಜಾರಿಯಾಗಬೇಕು.

ಡಿಜಿಟಲ್ ಇಂಡಿಯಾ ಯುಗದಲ್ಲಿ ನಾಗರಿಕ ಸೇವೆಗಳು ಕಾಗದಪತ್ರ ಆಡಳಿತದಿಂದ ಡೇಟಾ ಚಾಲಿತ ಆಡಳಿತಕ್ಕೆ ಪರಿವರ್ತನೆಗೊಳ್ಳಬೇಕು. ಸೇವಾ ವಿತರಣೆಯಲ್ಲಿ ವಿಳಂಬ, ಮಧ್ಯವರ್ತಿಗಳ ಪ್ರಭಾವ, ಭ್ರಷ್ಟಾಚಾರ ಇವುಗಳನ್ನು ತಂತ್ರಜ್ಞಾನದಿಂದ ಕಡಿಮೆ ಮಾಡಬಹುದು. ಆದರೆ ತಂತ್ರಜ್ಞಾನ ಬಳಸಲು ಕೌಶಲ್ಯವೂ ಅಗತ್ಯ. ಪ್ರತಿಯೊಬ್ಬ ಅಧಿಕಾರಿಗೂ ಡಿಜಿಟಲ್ ಆಡಳಿತ ತರಬೇತಿ ಕಡ್ಡಾಯವಾಗಬೇಕು. ನಾಗರಿಕ ಸೇವೆಗಳ ಮೇಲಿನ ಸಾರ್ವಜನಿಕ ನಂಬಿಕೆ ಅವರ ನೈತಿಕತೆ ಮೇಲೆ ನಿಂತಿದೆ. ಭ್ರಷ್ಟಾಚಾರ ಪ್ರಕರಣಗಳು ಬೆಳಕಿಗೆ ಬಂದಾಗ, ಅದು ಸಂಪೂರ್ಣ ವ್ಯವಸ್ಥೆಯ ಮೇಲೆ ಪ್ರಶ್ನೆ ಎತ್ತುತ್ತದೆ. ದಂಡಾತ್ಮಕ ಕ್ರಮಗಳ ಜೊತೆಗೆ ನೈತಿಕ ತರಬೇತಿ, ಪಾರದರ್ಶಕ ಆಸ್ತಿ ಘೋಷಣೆ ಮತ್ತು ಸಾರ್ವಜನಿಕ ಪರಿಶೀಲನೆ ವ್ಯವಸ್ಥೆ ಬಲವಾಗಬೇಕು.


ಭಾರತೀಯ ಸಂವಿಧಾನದ ಭಾಗ XIV ನಾಗರಿಕ ಸೇವೆಗಳ ಕುರಿತು ಸ್ಪಷ್ಟ ನಿರ್ದೇಶನ ನೀಡುತ್ತದೆ. ಕೇಂದ್ರ ಮತ್ತು ರಾಜ್ಯ ಸಾರ್ವಜನಿಕ ಸೇವಾ ಆಯೋಗಗಳು ಈ ವ್ಯವಸ್ಥೆಯ ಭಾಗ. ಸಂವಿಧಾನ ರಚನಾಕಾರರು ಆಡಳಿತದ ಸ್ಥಿರತೆ ಮತ್ತು ನಿರಪೇಕ್ಷತೆಯನ್ನು ಗಮನದಲ್ಲಿಟ್ಟುಕೊಂಡಿದ್ದರು. ಆದರೆ ಮೂಲಭೂತ ರಚನೆಯ ಭಾಗವಾದ ಪ್ರಜಾಸತ್ತಾತ್ಮಕತೆ ಮತ್ತು ಹೊಣೆಗಾರಿಕೆ ಇಂದಿನ ಕಾಲದಲ್ಲಿ ಹೆಚ್ಚಿನ ಅರ್ಥ ಪಡೆದುಕೊಂಡಿವೆ. ಈ ಹಿನ್ನೆಲೆಯಲ್ಲಿ, ಯಾವುದೇ ಸುಧಾರಣೆಗಳು ಸಂಯುಕ್ತ ವ್ಯವಸ್ಥೆಗೆ ಧಕ್ಕೆಯಾಗದಂತೆ, ರಾಜ್ಯಗಳ ಪಾತ್ರವನ್ನು ಗೌರವಿಸುವಂತೆ ರೂಪಿಸಬೇಕು. ಕೇಂದ್ರ ಸೇವೆಗಳು ಮತ್ತು ರಾಜ್ಯ ಸೇವೆಗಳ ನಡುವೆ ಸಮನ್ವಯ ಮತ್ತು ಗೌರವದ ಸಂಬಂಧ ಅಗತ್ಯ.

ಸಿಂಗಪುರ, ಯುಕೆ, ಆಸ್ಟ್ರೇಲಿಯಾ ಇಂತಹ ದೇಶಗಳಲ್ಲಿ ನಾಗರಿಕ ಸೇವೆಗಳು ಫಲಿತಾಂಶ ಆಧಾರಿತ, ಗುರಿ ನಿರ್ದಿಷ್ಟ ಮತ್ತು ಪಾರದರ್ಶಕವಾಗಿವೆ. ತರಬೇತಿ ನಿರಂತರ, ಕಾರ್ಯಕ್ಷಮತೆ ಅಳೆಯುವ ಮಾನದಂಡ ಸ್ಪಷ್ಟ. ಭಾರತದಲ್ಲಿ ತರಬೇತಿ ಸಂಸ್ಥೆಗಳಿದ್ದರೂ, ತರಬೇತಿಯ ನಂತರದ ನಿರಂತರ ಮೌಲ್ಯಮಾಪನ ವ್ಯವಸ್ಥೆ ದುರ್ಬಲವಾಗಿದೆ. ಇಂದಿನ ಯುವಜನತೆ ವೇಗ, ಪಾರದರ್ಶಕತೆ ಮತ್ತು ಜವಾಬ್ದಾರಿತ್ವವನ್ನು ನಿರೀಕ್ಷಿಸುತ್ತಿದೆ. ಫೈಲ್ ಮುಂದುವರಿಯುತ್ತಿದೆ ಎಂಬ ಉತ್ತರ ಈಗ ಸಾಕಾಗುವುದಿಲ್ಲ. ಉದ್ಯಮ ಸ್ಥಾಪನೆ, ಭೂ ನೋಂದಣಿ, ಪೊಲೀಸ್ ಸೇವೆ, ಕಲ್ಯಾಣ ಯೋಜನೆ ಇವೆಲ್ಲವೂ ಸಮಯಬದ್ಧ ಸೇವೆಯಾಗಬೇಕು. ನಾಗರಿಕ ಸೇವೆಗಳು ಸೇವಾ ಮನೋಭಾವವನ್ನು ಪುನರುಜ್ಜೀವನಗೊಳಿಸಬೇಕು.

**ಮರುರಚನೆಗೆ ಮಾರ್ಗಸೂಚಿಗಳು ಪರಿಗಣಿಸಲ್ಪಟ್ಟಲ್ಲಿ;**

1. ಪರಿಣಾಮ ಆಧಾರಿತ ಮೌಲ್ಯಮಾಪನ, ಜಿಲ್ಲಾವಾರು ಸೂಚ್ಯಂಕ ಆಧಾರದಲ್ಲಿ ಕಾರ್ಯಕ್ಷಮತೆ ಅಳೆಯುವುದು.
2. ನಿಶ್ಚಿತ ಅವಧಿ ನಿಯಮ – ರಾಜಕೀಯ ಒತ್ತಡ ಕಡಿಮೆ ಮಾಡಲು.
3. ಲ್ಯಾಟರಲ್ ಎಂಟ್ರಿ ಪಾರದರ್ಶಕತೆ – ಸ್ಪಷ್ಟ ಮಾನದಂಡಗಳು.
4. ಡಿಜಿಟಲ್ ಕೌಶಲ್ಯ ತರಬೇತಿ – ಪ್ರತಿಯೊಬ್ಬ ಅಧಿಕಾರಿಗೂ ಕಡ್ಡಾಯ.
5. ನೈತಿಕತಾ ಕೋಡ್ ಬಲಪಡಿಕೆ – ಆಸ್ತಿ ಘೋಷಣೆ, ಸಾರ್ವಜನಿಕ ಪರಿಶೀಲನೆ.
6. ರಾಜ್ಯ–ಕೇಂದ್ರ ಸಮನ್ವಯ ವೇದಿಕೆ – ಸಂಯುಕ್ತ ಗೌರವ ಉಳಿಸಲು.

ನಾಗರಿಕ ಸೇವೆಗಳು ಭಾರತದ ಅಭಿವೃದ್ಧಿಯ ವೇಗವನ್ನು ನಿರ್ಧರಿಸುವ ಪ್ರಮುಖ ಅಂಶಗಳಾಗಿವೆ. ಸುಧಾರಣೆ ಎಂದರೆ ವ್ಯವಸ್ಥೆಯನ್ನು ದುರ್ಬಲಗೊಳಿಸುವುದಲ್ಲ; ಅದನ್ನು ಕಾಲಾನುಸಾರ ಬಲಪಡಿಸುವುದು. ಸ್ಟೀಲ್ ಫ್ರೇಮ್ ಎಂಬುದು ಈಗ ಜನಕೇಂದ್ರಿತ, ಪಾರದರ್ಶಕ, ಫಲಿತಾಂಶ ಮೂಲಕ ಸರ್ವೀಸ್ ಫ್ರೇಮ್ ಆಗಬೇಕು.




ನಾವು ಇನ್ನೂ ವಸಾಹತುಶಾಹಿಯ ಆಡಳಿತ ನೆರಳಿನಲ್ಲಿ ಬದುಕಬೇಕೇ? ಅಥವಾ ನವಭಾರತದ ಆತ್ಮಕ್ಕೆ ತಕ್ಕಂತೆ ನಾಗರಿಕ ಸೇವೆಗಳನ್ನು ಮರುರಚಿಸಬೇಕೇ? ಎಂಬುದೇ ಈಗಿನ ಪ್ರಶ್ನೆಯಾಗಿದೆ. ಭಾರತೀಯ ನಾಗರಿಕ ಸೇವೆಗಳ ಮೂಲವನ್ನು ನೋಡಿದರೆ ಅದು ಬ್ರಿಟಿಷರ ಕಾಲದ ಭಾರತೀಯ ನಾಗರಿಕ ಸೇವೆ (ICS) ನಲ್ಲಿ ಕಂಡುಬರುತ್ತದೆ. ಲಾರ್ಡ್ ಕರ್ಝನ್ ಕಾಲದಲ್ಲಿ ಇದನ್ನು ಸ್ಟೀಲ್ ಫ್ರೇಮ್ ಆಫ್ ಇಂಡಿಯಾ ಎಂದು ಕರೆದರು. ಇದರ ಉದ್ದೇಶ ಪ್ರಜೆಗಳ ಕಲ್ಯಾಣವಲ್ಲ; ಸಾಮ್ರಾಜ್ಯದ ಹಿತಾಸಕ್ತಿ. ಸ್ವಾತಂತ್ರ್ಯಾನಂತರ ಸರ್ದಾರ್ ಪಟೇಲರು ಸಂವಿಧಾನ ಸಭೆಯಲ್ಲಿ ನಾಗರಿಕ ಸೇವೆಗಳ ಮಹತ್ವವನ್ನು ವಿವರಿಸಿ, ನೀವು ಈ ಸ್ಟೀಲ್ ಫ್ರೇಮ್ ಅನ್ನು ತೆಗೆದರೆ ದೇಶವೇ ಕುಸಿಯುತ್ತದೆ ಎಂದು ಎಚ್ಚರಿಸಿದ್ದರು. ಆದರೆ ಅವರು ಕಲ್ಪಿಸಿದ ಸ್ಟೀಲ್ ಫ್ರೇಮ್ ಎಂದರೆ ರಾಷ್ಟ್ರೀಯ ಏಕತೆಯ ಸಾಧನ.

ಇಂದಿನ ಸವಾಲು ಬೇರೆ. ಆಡಳಿತದ ಗುರಿ ನಿಯಂತ್ರಣದಿಂದ ಸೇವೆಗೆ ಬದಲಾಗಬೇಕು. ಅಧಿಕಾರ ಕೇಂದ್ರಿತ ಆಡಳಿತದಿಂದ ನಾಗರಿಕ ಕೇಂದ್ರಿತ ಆಡಳಿತಕ್ಕೆ ಪರಿವರ್ತನೆ ಆಗಬೇಕಾಗಿದೆ. ಯುಪಿಎಸ್‌ಸಿ ನಡೆಸುವ ಪರೀಕ್ಷೆ ವಿಶ್ವದ ಅತ್ಯಂತ ಕಠಿಣ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಒಂದು. ಆದರೆ ಸದ್ಯ ಪ್ರಶ್ನೆ ಎದ್ದಿರುವುದು ಈ ಪರೀಕ್ಷೆಗಳು ಭವಿಷ್ಯದ ಆಡಳಿತ ನಾಯಕರನ್ನು ತಯಾರಿಸುತ್ತಿದೆಯೇ? ಎಂಬುದಾಗಿದೆ. ಭವಿಷ್ಯದ ಅಧಿಕಾರಿಗಳು ಕೇವಲ ಪರೀಕ್ಷಾ ಚಾಂಪಿಯನ್‌ಗಳಾಗದೆ, ಸಮಸ್ಯೆ ಪರಿಹಾರಕರಾಗಬೇಕು. ಭಾರತೀಯ ಆಡಳಿತ ವ್ಯವಸ್ಥೆ ಸಾಮಾನ್ಯಜ್ಞರ ಮೇಲೆ ನಿರ್ಮಿತವಾಗಿದೆ. ಐಎಎಸ್ ಅಧಿಕಾರಿಗಳು ಕೃಷಿ ಇಲಾಖೆಯಿಂದ ಹಿಡಿದು ಹಣಕಾಸು ಇಲಾಖೆವರೆಗೆ ವರ್ಗಾವಣೆ ಆಗುತ್ತಾರೆ. ಆದರೆ ಹವಾಮಾನ ಬದಲಾವಣೆ, ಡಿಜಿಟಲ್ ಆರ್ಥಿಕತೆ, ಕೃತಕ ಬುದ್ಧಿಮತ್ತೆ, ಸೈಬರ್ ಸುರಕ್ಷತೆ ಇವು ತಜ್ಞತೆಯನ್ನು ಬೇಡುತ್ತವೆ.

ಕೇಂದ್ರ ಸರ್ಕಾರವು ಸಂಯುಕ್ತ ಕಾರ್ಯದರ್ಶಿ ಮಟ್ಟದಲ್ಲಿ ಲ್ಯಾಟರಲ್ ಎಂಟ್ರಿ ಆರಂಭಿಸಿದೆ. ಇದು ವ್ಯವಸ್ಥೆಗೆ ತಜ್ಞತೆಯನ್ನು ತರಬಹುದು. ಆದರೆ ಪಾರದರ್ಶಕತೆ ಮತ್ತು ಮೌಲ್ಯಾಧಾರಿತ ಆಯ್ಕೆ ಇಲ್ಲದಿದ್ದರೆ ಅದು ವಿಶ್ವಾಸ ಕುಗ್ಗಿಸಬಹುದು. ಆದ್ದರಿಂದ, ಲ್ಯಾಟರಲ್ ನೇಮಕಾತಿಗೆ ಸಂವಿಧಾನಾತ್ಮಕ ಮೇಲ್ವಿಚಾರಣೆ, ಸ್ಪಷ್ಟ ಅರ್ಹತಾ ಮಾನದಂಡ, ಕಾರ್ಯಕ್ಷಮತೆ ಆಧಾರಿತ ಒಪ್ಪಂದ ನಿಯೋಜನೆ ಬಹಳ ಮುಖ್ಯ.

ಇಂದಿನ ವಾರ್ಷಿಕ ಕಾನ್ಫಿಡೆನ್ಷಿಯಲ್ ವರದಿ(ACR) ಪದ್ಧತಿ ಬಹುತೇಕ ಆಂತರಿಕವಾಗಿದೆ. ಸಾರ್ವಜನಿಕ ಪರಿಶೀಲನೆ ಇಲ್ಲ. ಇದಕ್ಕೆ ಹೊಸ ದಿಕ್ಕು ನೀಡಲು, ಜಿಲ್ಲಾ ಮಾನವ ಅಭಿವೃದ್ಧಿ ಸೂಚ್ಯಂಕದ ಆಧಾರದಲ್ಲಿ ಮೌಲ್ಯಮಾಪನ, ಸಮಯಬದ್ಧ ಸೇವಾ ವಿತರಣಾ ಸೂಚ್ಯಂಕ, ಹೂಡಿಕೆ ಆಕರ್ಷಣೆ ಮತ್ತು ಉದ್ಯೋಗ ಸೃಷ್ಟಿ ಸೂಚ್ಯಂಕ, ಶಿಕ್ಷಣ ಮತ್ತು ಆರೋಗ್ಯ ಸುಧಾರಣೆ ಮಾನದಂಡ ಇತ್ಯಾದಿಗಳು ಒಬ್ಬ ಜಿಲ್ಲಾಧಿಕಾರಿಯ ಕಾರ್ಯಕ್ಷಮತೆ ಆ ಜಿಲ್ಲೆಯ ಅಭಿವೃದ್ಧಿಯಲ್ಲಿ ಗೋಚರಿಸಬೇಕು.

ಪದೇಪದೇ ವರ್ಗಾವಣೆ ಆಡಳಿತದ ಗಂಭೀರ ಸಮಸ್ಯೆ. ಒಂದು ಅಧಿಕಾರಿಗೆ ಯೋಜನೆ ರೂಪಿಸಲು ಕನಿಷ್ಠ 2–3 ವರ್ಷ ಬೇಕು. ಆದರೆ 6 ತಿಂಗಳಲ್ಲೇ ವರ್ಗಾವಣೆ ಆಗುವುದರಿಂದ ದೀರ್ಘಾವಧಿ ಯೋಜನೆ ಅಸಾಧ್ಯ. ಹಾಗಾಗಿ, ವರ್ಗಾವಣೆ ಪಾರದರ್ಶಕ ಪೋರ್ಟಲ್‌ನಂತಹ ವ್ಯವಸ್ಥೆ ಅತ್ಯಗತ್ಯ ಎನ್ನಬಹುದು.

ಸೆಂಟ್ರಲ್ ವಿಜಿಲೆನ್ಸ್ ಕಮಿಷನ್ ಮತ್ತು ಸಿಬಿಐ ಇದ್ದರೂ, ಪ್ರಕರಣಗಳ ದೀರ್ಘಾವಧಿ ವಿಚಾರಣೆ ಸಾರ್ವಜನಿಕರ ವಿಶ್ವಾಸವನ್ನು ಕುಗ್ಗಿಸುತ್ತದೆ. ಇದಕ್ಕಾಗಿ ಅಗತ್ಯ ಸುಧಾರಣೆಗಳಂತಹ ವೇಗವಾದ ದಂಡಾತ್ಮಕ ಕ್ರಮ, ಸಾರ್ವಜನಿಕ ಆಸ್ತಿ ಘೋಷಣೆ, ಡಿಜಿಟಲ್ ಟ್ರ್ಯಾಕಿಂಗ್, ಸಾಮಾಜಿಕ ಪರಿಶೀಲನೆ ಹಾಗೂ ನೈತಿಕ ತರಬೇತಿ ಕಡ್ಡಾಯವಾಗಬೇಕು. ಆಡಳಿತದಲ್ಲಿ ಮಾನವೀಯತೆ ಮೇಳೈಸಬೇಕು. ಸಂಖ್ಯೆಗಳು ಮತ್ತು ಡೇಟಾ ಮುಖ್ಯ. ಆದರೆ ಆಡಳಿತದ ಹೃದಯ ಮಾನವೀಯತೆಯಾಗಿರಬೇಕಾದುದು ಇಂದಿನ ಸಮಾಜಕ್ಕೆ ಅವಶ್ಯವಾಗಿದೆ. ಪೌಷ್ಟಿಕತೆ ಕೊರತೆಯ ಮಗುವಿಗೆ, ಹಕ್ಕು ಸಿಗದ ರೈತನಿಗೆ, ನ್ಯಾಯಕ್ಕಾಗಿ ಕಾಯುತ್ತಿರುವ ಮಹಿಳೆಗೆ ಆಡಳಿತ ಸ್ಪಂದಿಸಬೇಕು.

ಸುಧಾರಣೆ ಎಂದರೆ ಪರಂಪರೆಯನ್ನು ತಿರಸ್ಕರಿಸುವುದಲ್ಲ. ವ್ಯವಸ್ಥೆಯನ್ನು ಕಾಲದ ಅವಶ್ಯಕತೆಗೆ ಅನುಗುಣವಾಗಿ ಬಲಪಡಿಸುವುದು. ನಾಗರಿಕ ಸೇವೆಗಳು ಭಯದ ಆಡಳಿತದಿಂದ ವಿಶ್ವಾಸದ ಆಡಳಿತಕ್ಕೆ, ನಿಯಂತ್ರಣದಿಂದ ಸಹಕಾರಕ್ಕೆ, ಅಧಿಕಾರದಿಂದ ಹೊಣೆಗಾರಿಕೆಗೆ ರೂಪಾಂತರಗೊಳ್ಳಬೇಕು.

ಬಹುತೇಕರು ಉತ್ತರ ಭಾಗದವರೇ ಹೆಚ್ಚಾಗಿ ಆಯ್ಕೆಯಾಗುವ ಸಾಧ್ಯತೆ ಹೆಚ್ಚಾಗಿರಲು ಕಾರಣ, ಅವರ ಬಡತನದ ಜೊತೆಗೆ, 'ಲಾಲ್ ಬತ್ತಿ ಗಾಡಿ' ಎಂಬ ಉಮೇದುವಾರಿಕೆ ಅವರನ್ನು ನಾಗರಿಕ ಸೇವೆಯಲ್ಲಿ ತೊಡಗುವಂತೆ ಮಾಡುತ್ತಿದೆ. ಇದು, ಸಮಾಜ ಸೇವೆಗೆ, ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವಲ್ಲಿ ಸಕರಾತ್ಮಕವಾಗಿ ಹೊಂದಿಕೊಳ್ಳಬೇಕು. ಇಲ್ಲವಾದಲ್ಲಿ, ಯಾರನ್ನೋ ಮೆಚ್ಚಿಸಲೋ, ಸಮಾಜದಲ್ಲಿ ಪ್ರತಿಷ್ಠೆ ಗಳಿಸಲು, ಸರ್ಕಾರಿ ಸೌಲಭ್ಯ ಸಿಗುತ್ತದೆಯೆಂದಷ್ಟೇ ಐಎಎಸ್, ಐಪಿಎಸ್‌ಗಳನ್ನು ಪಾಸು ಮಾಡುತ್ತಿದ್ದರೆ, ಇದರ ನೈಜ ಕಾರಣವೇ ಸತ್ತುಹೋಗುತ್ತದೆ. ಸೇವಾಕಾರಕವೆಂಬುದು ಆತ್ಮವಿಲ್ಲದ ನೌಕರಿಯಂತಾಗುತ್ತದೆ. ಹಾಗಾಗಿ, ಇಂದಿನ ಯುವಜನತೆ ಇದನ್ನು ಇನ್ನಷ್ಟು ಸಮರ್ಪಕವಾಗಿ ಬಳಸಿಕೊಳ್ಳಲು ಉತ್ತೇಜಿತರಾಗಬೇಕು. ವ್ಯವಸ್ಥೆಯೂ ಬದಲಾಗಲಿ, ಕಾಲಕ್ಕೆ ತಕ್ಕಂತೆ ಪರಿವರ್ತನೆ ಈ ಜಗದ ನಿಯಮವಾಗಿದ್ದು, ನಾವೂ ಹೊಸತನ್ನು ಅಪ್ಪಿಕೊಳ್ಳಲು ಮುಕ್ತವಾಗಿರೋಣ.

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:11, Issue: 42